the Surgeons in the Tumkur Hospital and they have decided that this is the first case and precautionary steps were taken. In the second also, it was later on detected as tetanus and there after they closed the Operation Theatre and shifted to the Theatre in the I.P.P. Annexure. As I have already said, the first case viz., Sri Veeranagappa's was treated by some quack doctors. As pointed out by the hon. member Sri Anadanaiah, there is no case where surgical equipments were not sterilised. I think what he said was not correct.

We have sufficient drugs and injections for tetanus which will last for more than three months. I have not received any complaint that Class IV servants are not being treated.

About the man-handling of Dr. Kankavi, this has no relevance to the subject. However, as the hon. member Sri Ramdev and others have raised this matter, I can assure them that no doctors should be man-handled by any person, no matter to which political party they may belong. If any doctor requires protection I may assure through you Sir, that they will certainly be given protection. This manhandling has got to be definitely discouraged. About hospital cleanliness I will answer separately.

ಶ್ರೀ ಶಫಿ ಅಹಮ್ಮದ್.—ಮಾನ್ಯ ಮಂತ್ರಿಗಳು ತುಮಕೂರಿಗೆ ಭೇಟಿ ಕೊಟ್ಟಿದ್ದಾಗ ಈ ಡಾ. ಕನಗಾವಿಯವರ ಬಗ್ಗೆ ಅಲ್ಲಿನ ಜನ ದೂರನ್ನು ಕೊಟ್ಟಿದ್ದರು. ಕಾರಣ ಏನೆಂದರೆ ನಾರ್ಮಲ್ ಡಿಲವರೀಸ್ ಕೇಸಸ್‌ನಲ್ಲೂ ಅವರನ್ನು ಎದುರಿಸಿ, ಬೆದರಿಸಿ ೨೦೦ ರೂ.ಗಳನ್ನು ತೆಗೆದುಕೊಂಡು ಸಿಜೇರಿಯನ್ ಆಪರೇಷನ್ ಮಾಡುವುದು. ಇದರಿಂದಾಗಿ ಅಲ್ಲಿನ ಜನತೆ ಬೇಸರಪಟ್ಟು ಆ ವೈದ್ಯರ ಮೇಲೆ ಕೈ ಮಾಡಿದರು ಎಂಬುದಾಗಿ ನನಗೂ ಸಹ ತಿಳಿದು ಬಂದಿದೆ. ಆದುದರಿಂದ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳುತ್ತಿದ್ದೇನೆ.

SRI A. K. ABDUL SAMAD.—There are officials who are enquiring into the matter and we will deal with them.

MATTER UNDER RULE 312

re: Shifting of the Godown Proposed to be Constructed in Hubli to Andhra Pradesh.

† ಶ್ರೀ ಎಸ್. ಆರ್. ಬೊಮ್ಮಾಯಿ.—ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಹುಬ್ಬಳ್ಳಿಯಲ್ಲಿ ಒಂದು ಉಗ್ರಾಣವನ್ನು ೨ ಕೋಟಿ ರೂ. ವೆಚ್ಚದಲ್ಲಿ ಕಟ್ಟುವುದಕ್ಕೆ ನಿರ್ಣಯ ಮಾಡಿದ್ದು, ಈ ಬಗ್ಗೆ ಎಲ್ಲಾ ಸಂಗತಿಗಳನ್ನು ಪರಿಶೀಲಿಸಿ ದಕ್ಷಿಣ ಭಾರತದ ಹುಬ್ಬಳ್ಳಿಯಲ್ಲಿ ಮಾಡುವ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದರು. ಈ ಬಗ್ಗೆ ೩೬ ಎಕರೆ ಜಮೀನನ್ನೂ ಸಹಾ ತೆಗೆದುಕೊಂಡಿದ್ದು ಅಲ್ಲಿಗೆ ರೈಲ್ವೇ ಹಳಿಗಳನ್ನು ಹಾಕುವುದಕ್ಕೂ ವ್ಯವಸ್ಥೆ ಮಾಡಲಾಗಿತ್ತು. ಈ ನಿರ್ಣಯವನ್ನು ತೆಗೆದುಕೊಳ್ಳುವಾಗ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳೆರಡಕ್ಕೂ ಅನುಕೂಲಕರವಾಗುವಂತಹ ಸ್ಥಳವಾದ ಹುಬ್ಬಳ್ಳಿಯನ್ನು ಆಯ್ಕೆ ಮಾಡಲಾಯಿತು. ಕಾರವಾರ ಬಂದರೂ ಸಹಾ ಇಲ್ಲಿಗೆ ಸಮೀಪ ಇದ್ದುದರಿಂದ

ಸಾಗಾಣಿಕೆ ದೃಷ್ಟಿಯಿಂದ ಈ ಸ್ಥಳವನ್ನು ಆಯ್ಕೆ ಮಾಡಲಾಯಿತು. ಈ ಒಂದು ಉದ್ಯಮದಿಂದ ಸುಮಾರು ೨,೦೦೦ ಜನರಿಗೆ ಕೆಲಸ ಸಿಗುವಂತಹ ಒಂದು ಅವಕಾಶ ಇದೆ. ಮಾನ್ಯ ಆಹಾರ ಮಂತ್ರಿಗಳು ೨೦ ಹೊಸ ಫ್ಲೋರ್ ಮಿಲ್ಸ್‌ಗೆ ಲೈಸೆನ್ಸ್ ಕೊಟ್ಟಿರುವ ಈ ಸಂದರ್ಭದಲ್ಲಿ ದಾಸಾನನ್ನು ಸಂಗ್ರಹಿಸಿಡುವುದಕ್ಕೆ ಈ ಉಗ್ರಾಣ ಬಹಳ ಪ್ರಾಮುಖ್ಯತೆಯನ್ನು ಪಡೆಯುವುದು. ಈ ಎಲ್ಲಾ ಕೆಲಸಗಳು ಆದಮೇಲೆ ರಾಜಕೀಯ ಒತ್ತಡದಿಂದ ಎಂದರೆ, ಆಂಧ್ರ ಸರ್ಕಾರದ, ಆಂಧ್ರದ ರಾಜಕೀಯ ನಾಯಕರ ಒಂದು ಯೋಜನೆಯಿಂದ ಈ ಉಗ್ರಾಣವನ್ನು ಕಟ್ಟುವ ಕೆಲಸವನ್ನು ಆಂಧ್ರ ಪ್ರದೇಶದಲ್ಲಿ ಕಟ್ಟತಕ್ಕ ನಿರ್ಣಯ ವಾಗಿಯೆಂದು ಕೇಳಿದ್ದೇನೆ. ಮದ್ರಾಸ್‌ನಲ್ಲಿ ಇರತಕ್ಕಂತಹ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ತನಿಖೆ ಮಾಡಿ, ಜಾಗವನ್ನು ಪರಿಶೀಲನೆ ಮಾಡಿ ಹುಬ್ಬಳ್ಳಿಯಲ್ಲಿ ನಿರ್ಮಾಣ ಮಾಡುವುದಕ್ಕೆ ಹಣವನ್ನೂ ಕೂಡ ಖರ್ಚು ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಇದಕ್ಕೆ ವಿಶ್ವಬ್ಯಾಂಕಿನ ಹಣ ಸಹಾಯ ಕೂಡ ಸಿಗುತ್ತದೆ. ಇಂತಹ ಒಂದು ಉಗ್ರಾಣ ನಮ್ಮ ರಾಜ್ಯಕ್ಕೆ ಬರತಕ್ಕದ್ದನ್ನು ನಾವು ಈಗ ಕಳೆದುಕೊಳ್ಳುತ್ತಿದ್ದೇವೆ. ಇದಕ್ಕೆ ರಾಜಕೀಯದ ಒಂದು ಒತ್ತಡ ಎಂದು ತಿಳಿದು ಆ ಮಾಹಿತಿಯ ಆಧಾರದಿಂದ ಹೇಳುತ್ತಿದ್ದೇನೆ. ಈ ಬಗ್ಗೆ ನಮ್ಮ ಸರ್ಕಾರ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ಕೂಡಲೇ ಕಾರ್ಯಕ್ರಮ ಕೈಗೊಳ್ಳದಿದ್ದರೆ ಈ ಉಗ್ರಾಣ ಕರ್ನಾಟಕದಿಂದ ಬೇರೆಕಡೆಗೆ ಹೊರಟುಹೋಗುತ್ತದೆ. ಇದರಲ್ಲಿನ ನಿಜ ಸಂಗತಿ ಏನೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹುಬ್ಬಳ್ಳಿಗೆ ಯಾವುದೇ ಸ್ಕೀಮ್ ಬರಲಿ ಅವು ಹಾಗೇ ಹೋಗಿಬಿಡುತ್ತವೆ. ಹುಬ್ಬಳ್ಳಿಗೆ ಅನೇಕ ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳು ಬರುವ ಯೋಜನೆಗಳಿದ್ದವು, ಆದರೆ ಯಾವುವೂ ಬರಲಿಲ್ಲ. ಈ ಉಗ್ರಾಣವನ್ನಾದರೂ ಉಳಿಸಿಕೊಳ್ಳುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಬಾವೂರಾವ್ ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ವಿಷಯದಲ್ಲಿ ಆದರಲ್ಲೂ ಉತ್ತರ ಕರ್ನಾಟಕದ ಹುಬ್ಬಳ್ಳಿಯ ವಿಷಯದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ತೋರಿಸುತ್ತಿದೆಯೆಂದು ನಾನು ಹೇಳುತ್ತೇನೆ. ಇವತ್ತು ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಎಷ್ಟು ಪ್ರಭಾವ ಇಟ್ಟುಕೊಂಡಿದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಬಳ್ಳಾರಿಯಲ್ಲಿ ಉಪ್ಪಿನ ಕಾರ್ಖಾನೆ ಆಗಬೇಕಾಗಿತ್ತು, ಏನೋ ಅಡಚಣೆಯಿಂದ ಅದು ಅಲ್ಲಿಗೇನಿಂತಿತು. ಹುಬ್ಬಳ್ಳಿ ಕಾರವಾರ ರೈಲು ಮಾರ್ಗ ಆಗಬೇಕಾಗಿತ್ತು. ಆ ರೈಲು ಮಾರ್ಗವೂ ಸಹಾ ಹೋಯಿತು. ಅದೇ ರೀತಿ ವಿಮಾನ ನಿಲ್ದಾಣ ಆಗಬೇಕಾಗಿತ್ತು. ಅದಕ್ಕೆ ಜಾಗವೂ ದೊರಕಲಾಗಿದ್ದು ಆ ವಿಮಾನ ನಿಲ್ದಾಣವೂ ಹಾರಿ ಹೋಯಿತು. ಈ ದಿನ ಹುಬ್ಬಳ್ಳಿಯಲ್ಲಿ ತೆಲುಗು ಕನ್ನಡವಾಗುತ್ತದೆ, ಆದರೆ ಕನ್ನಡ ಕನ್ನಡ ವಾಗುವುದಿಲ್ಲ. ಇಂತಹ ಪರಿಸ್ಥಿತಿಯಿರುವಾಗ ೨,೦೦೦ ಮಂದಿಗೆ ಕೆಲಸವನ್ನು ಒದಗಿಸತಕ್ಕ ಉಗ್ರಾಣ ರಾಜ್ಯ ಬಿಟ್ಟು ಹೊರಕ್ಕೆ ಹೋಗುತ್ತಿದೆ. ಇಲ್ಲಿ ಎಲ್ಲಾ ಅಂಕಿಸಂಖ್ಯೆಗಳನ್ನು, ಅನುಕೂಲಗಳನ್ನೂ, ಸೌಕರ್ಯಗಳನ್ನೂ ನೋಡಿಕೊಂಡೇ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಒಪ್ಪಿಗೆ ಕೊಟ್ಟಿರತಕ್ಕ ಕೆಲಸ. ಈ ರೀತಿ ಇರುವಾಗ ಈಗ ಈ ಕೆಲಸ ಆಂಧ್ರಾಕ್ಕೆ ಹೋಗುತ್ತಿದೆ ಎಂಬ ಸುದ್ದಿ ಬಂದಿರುವುದು ಜನರನ್ನು ಕಳವಳಕ್ಕೆ ಈಡು ಮಾಡಿದೆ. ಇದೇನು ಸರ್ಕಾರದ ವತಿಯಿಂದ ತೆಗೆದುಕೊಂಡ ಕಾರ್ಯಕ್ರಮವೇ? ಈ ಬಗ್ಗೆ ಸರ್ಕಾರ ತನ್ನ ಪ್ರಭಾವನ್ನು ಬೀರುತ್ತದೋ ಅಥವಾ ಕೈಬಿಟ್ಟುಬಿಡುತ್ತದೋ ಎಂಬುದನ್ನು ತಿಳಿಸಬೇಕು. ಹುಬ್ಬಳ್ಳಿಯಲ್ಲೇ ಉಗ್ರಾಣ ಆಗಬೇಕೆಂಬ ನಿರ್ಣಯದ ಮೇಲೆ ಕೇಂದ್ರ ಸರ್ಕಾರಕ್ಕೆ ಪ್ರಭಾವ ಬೀರಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ರಾಮ್‌ಭಟ್ (ಪುತ್ತೂರ್).—ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದಂತಹ ವರದಿಯ ಆಧಾರದ ಮೇಲೆ ನಾವು ಈ ವಿಷಯವನ್ನು ಎತ್ತುತ್ತಿದ್ದೇವೆ. ಈ ರೀತಿ ಉಗ್ರಾಣವನ್ನು ವರ್ಗಾವಣೆ ಆಗಿರುವುದರ ಬಗ್ಗೆ ನಿರ್ಣಯವಾಗಿರುವುದು ನಿಜವೇ? ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಈಗ ಉತ್ತರ ವನ್ನು ಕೊಡಬೇಕು. ಈ ರೀತಿ ನಿರ್ಣಯವೇನಾದರೂ ಆಗಿದ್ದರೆ ಆ ಬಗ್ಗೆ ಕೇಂದ್ರ ಸರ್ಕಾರದವರು ನಮ್ಮ ರಾಜ್ಯ ಸರ್ಕಾರದೊಂದಿಗೆ ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆಯೇ? ಅಥವಾ ಸರ್ಕಾರದ ಒಂದು ಅಲ್ಲಕ್ಷ್ಯದಿಂದ ಈ ಸ್ಥಿತಿ ಬಂದಿದೆಯೇ ಎಂಬುದರ ಬಗ್ಗೆ ಉತ್ತರವನ್ನು ಕೊಡಬೇಕು. ಇನ್ನೊಂದು ಹೆಚ್ಚಿಗೆ ಮಾಂದೆ ಹೋಗಿ ಹೇಳುತ್ತಿದ್ದೇನೆ. ಮಂಗಳೂರಿನಲ್ಲಿ ತಣ್ಣೀರುಬಾವಿ ಎಂಬಲ್ಲಿ ೫೦,೦೦೦ ಮೆಟ್ರಿಕ್ ಟನ್ ಕೆಪಾಸಿಟಿಯ ಗೋಡನ್ ಕಟ್ಟಬೇಕೆಂದು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದ ಒಂದು ಯೋಜನೆ ಇತ್ತು. ಈ ಬಗ್ಗೆ ೨೫–೩೦ ಎಕರೆ ಜಾಗವನ್ನು ಒಂದು ಜಾಗದಲ್ಲಿ ಕೊಡಬೇಕೆಂದು

ಕೇಳಿಕೊಂಡಾಗ, ಆ ಜಮೀನನ್ನು ಥರ್ಮಲ್ ಪ್ಲಾಂಟ್‌ನವರು ಕೇಳುತ್ತಿದ್ದಾರೆ, ಬೇಕಾದರೆ ಸ್ವಲ್ಪ ಭಾಗವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡಿನವರು ತಿಳಿಸಿದರು, ಈ ಬಗ್ಗೆ ತನಿಖೆಯಾಗಿಲ್ಲ. ಆದ್ದರಿಂದ ಈ ಬಗ್ಗೆಯೂ ಸರ್ಕಾರ ಉತ್ತರವನ್ನು ಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಪತ್ರಿಕಾ ವರದಿ ಬಂದಮೇಲೆ ಬೆಂಗಳೂರಿನಲ್ಲಿರತಕ್ಕ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಅಧಿಕಾರಿಗಳ ಜೊತೆ ಸಂಪರ್ಕಸಲಾಗಿ ಈ ಬಗ್ಗೆ ಅವರಲ್ಲಿ ಮಾಹಿತಿ ಇಲ್ಲವೆಂದು ತಿಳಿಸಿದ್ದಾರೆ. ಹಾಗೂ ಈ ಬಗ್ಗೆ ಸಂಬಂಧಪಟ್ಟ ಕೇಂದ್ರ ಮಂತ್ರಿಗಳಿಗೆ ದೂರವಾಣಿಮುಖಾಂತರ ಸಂಪರ್ಕಿಸಲಾಗಿ ಅವರು ಊರಿನಲ್ಲಿ ಇರಲಿಲ್ಲವೆಂದು ತಿಳಿದುಬಂತು. ಆದ್ದರಿಂದ ಅವರ ಜೊತೆ ಮಾತನಾಡಲಾಗಲಿಲ್ಲ. ಆದ್ದರಿಂದ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ನಾಳೆ ಕೆಲವು ಅಧಿಕಾರಿಗಳನ್ನು ದೆಹಲಿಗೆ ಕಳುಹಿಸಿಕೊಡುತ್ತಿದ್ದೇವೆ. ಮತ್ತು ೧೯ನೇ ತಾರೀಖು ಕಾರ್ಮಿಕ ಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಲು ನಾನು ದೆಹಲಿಗೆ ಹೋಗುತ್ತಿದ್ದೇನೆ. ಆಗ ಅಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆ ಈ ಬಗ್ಗೆ ಮಾತನಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ಈ ದಿನ ಈ ಉಗ್ರಾಣವನ್ನು ಆಂಧ್ರ ಪ್ರದೇಶದಲ್ಲಿ ನಿರ್ಮಾಣ ಮಾಡಬೇಕೆಂಬ ಬಗ್ಗೆ ಆಂಧ್ರಪ್ರದೇಶದ ರಾಜಕೀಯ ಒತ್ತಡ ಇದೆಯೆಂದು ಸದಸ್ಯರು ತಿಳಿಸಿದರು. ನಾನು ಈ ಬಗ್ಗೆ ಕರ್ನಾಟಕದ ಪರವಾಗಿ ಈ ಉಗ್ರಾಣ ಕರ್ನಾಟಕದಲ್ಲಿಯೇ ಆಗಬೇಕೆಂದು ಕರ್ನಾಟಕದ ಪ್ರತಿನಿಧಿಯಾಗಿ ಕೇಂದ್ರದ ಮಂತ್ರಿಗಳ ಮೇಲೆ ಒತ್ತಡ ತರುತ್ತೇನೆನ್ನುವ ಆಶ್ವಾಸನೆಯನ್ನು ನಾನು ಈ ಸದನಕ್ಕೆ ಕೊಡುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇಷ್ಟು ಹೇಳಿದರೆ ಸಾಲದು. ತಾವು ಈ ಬಗ್ಗೆ ಅಧಿಕಾರಿಗಳನ್ನು ಕಳುಹಿಸುತ್ತಿದ್ದೀರಿ, ಹಾಗೂ ನೀವೂ ಸಹಾ ದೆಹಲಿಗೆ ಹೋಗುತ್ತಿದ್ದೀರಿ, ಸಂತೋಷ. ತಾವು ಅಲ್ಲಿಗೆ ಹೋದ ಮೇಲೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವದ ಮೇಲೆ ಪ್ರಭಾವ ಬೀರಿದ ಮೇಲೆ ಏನು ನಿರ್ಣಯ ಆಯಿತು ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಗೆ ಬಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ದೆಹಲಿಗೆ ಹೋಗಿ ಬಂದಮೇಲೆ ಏನಾಯಿತು ಎಂಬ ಬಗ್ಗೆ ಸಭೆಗೆ ತಿಳಿಸುತ್ತೇನೆ ನಾನು ಎಷ್ಟರಮಟ್ಟಿಗೆ ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬಿರುತ್ತೇನೆಂಬುದು ಮಾನ್ಯ ಬೊಮ್ಮಾಯಿಯವರಿಗೆ ಗೊತ್ತು.

ಶ್ರೀ ಕೆ. ರಾಮ್‌ಭಟ್.—ನಾನು ಮಂಗಳೂರಿನಲ್ಲಿ ಉಗ್ರಾಣ ಕಟ್ಟುವ ಬಗ್ಗೆ ಹೇಳಿದ ವಿಷಯವನ್ನೂ ಕೇಂದ್ರದ ಜೊತೆಚರ್ಚೆ ಮಾಡಬೇಕೆಂದು ಮಾನ್ಯ ಮಂತ್ರಿವರ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಆಗಬಹುದು.

Legislative Business

Karnataka State Universities (Amendment) Bill 1980

Leave to Introduce

SRI G.B. SHANKAR RAO (Minister for Education).—Sir, I beg to move.

"that leave be granted to introduce the Karnataka State Universities (Amendment) Bill, 1980."

MR. SPEAKER.—The question is.

"that leave be granted to introduce the Karnataka State Universities (Amendment) Bill, 1980.

The Motion was adopted and leave was granted